ಗಂಡು? ಚಹದ ಪುಡಿಯನ್ನು ಕೊಂಡು ಟಿನ್ನಿನಲ್ಲಿ ತುಂಬಿಸಿ ಹೋಗುವಾಗ ಮೂಗ ನಕ್ಕ. ಅಂಗಡಿಯವನನ್ನು ಕಂಡರೆ ತನಗೆ ತುಂಬಾ ಇಷ್ಟ. ಕೆಲವೊಮ್ಮೆ ಅವನೊಂದು ಬೀಡಿ ಕೊಡುತ್ತಾನೆ. ತೂಗಾಡುತ್ತಿರುವ ಹಗ್ಗದ ಅಂಚಿನಲ್ಲಿರುವ ಬೆಂಕಿಯನ್ನು ತಾಗಿಸಿ ತಾನು ಗತ್ತಿನಿಂದ ಆ ಬೀಡಿಯನ್ನು ಸೇದಿ ಹೊಗೆ ಬಿಡುತ್ತಾನೆ. ಒಮ್ಮೆ ಅವಳು ಕೇಳಿದ್ದಳು,

'ಮೂಗ, ನೀನು ಬೀಡಿ ಸೇದೋದನ್ನ ಶುರು ಮಾಡಿದೆ, ಅಲ್ವಾ? ದುರ್ವಾಸನೆ, ಸಹಿಸಲಿಕ್ಕಾಗ್ತಿಲ್ಲ.'

ಅದರ ನಂತರ ತಾನು ಅಂಗಡಿಯಲ್ಲೇನೂ ಬೀಡಿ ಸೇದುತ್ತಿರಲಿಲ್ಲ. ಮನೆಗೆ ತಂದು, ಅಂಗಳದ ಗೋಡೆಯ ತೂತೊಂದರಲ್ಲಿ ಸಿಕ್ಕಿಸಿಡುತ್ತೇನೆ. ರಾತ್ರಿ ಬಾಗಿಲು ಮುಚ್ಚಿದ ಮೇಲೆ ಅದನ್ನು ಹೊರ ತೆಗೆದು ಸೇದುತ್ತೇನೆ. ಶಂಕುಣ್ಣಿ ನಾಯರ್ ಬೆಂಕಿಪೊಟ್ಟಣವನ್ನು ತಾನು ಜೋಪಾನವಾಗಿಟ್ಟಿರುತ್ತೇನೆ. ಬೆಂಕಿಪೊಟ್ಟಣ ತೆಗೆದಿಟ್ಟರೆ ಅದು ಕಳ್ಳತನವಾಗುವುದಿಲ್ಲ. ಆದರೆ, ಬಿದ್ದ ತೆಂಗಿನಕಾಯಿಯನ್ನು ಹೆಕ್ಕಿತಂದು ತೆಗೆದಿಟ್ಟರೆ ಅದು ಕಳ್ಳತನ! ಅದು ಪಕ್ಕದ ಮನೆಯ ಹೊಲದ ತೆಂಗಿನಮರದ್ದು. ಒಮ್ಮೆ ತಾನು ಹಸುವನ್ನು ಕೊಟ್ಟಿಗೆಗೆ ಹೊಡೆದುಕೊಂಡು ಹೋಗುತ್ತಿದ್ದಾಗ ಪಕ್ಕದ ಹೊಲದಿಂದ ಒಂದು ತೆಂಗಿನಕಾಯಿ ಬಿತ್ತು. ತನ್ನ ತಲೆಯನ್ನು ಸವರಿ ಕಾಯಿ ಬಿದ್ದಿತ್ತು. ಆದ್ದರಿಂದ ಅದನ್ನು ತಾನು ಎತ್ತಿಕೊಂಡೆ. ಆ ಕೆಟ್ಟ ಕಾಯಿ ತನ್ನನ್ನು ಕೊಂದುಬಿಡುತ್ತಿತ್ತೇನೋ. ಅದಕ್ಕೆ ಅದನ್ನು ಸುಲಿದು ತಿನ್ನಬೇಕೆಂದುಕೊಂಡೆ. ಅಷ್ಟರಲ್ಲಿ ದೊಡ್ಡಮ್ಮ ಅದನ್ನು ನೋಡಿಬಿಟ್ಟರು. ಶಂಕುಣ್ಣಿ ನಾಯರ್‌ಗೂ ವಿಷಯ ಗೊತ್ತಾಯಿತು. ಅವಳೂ ಕೇಳಿಸಿಕೊಂಡಳು. ಕೊನೆಗೆ ದೊಡ್ಡ ರಾದ್ಧಾಂತವೇ ನಡೆಯಿತು.

'ಕಳ್ಳತನಾನೂ ಶುರು ಮಾಡಿದಿಯಾ?' ಶಂಕುಣ್ಣಿ ನಾಯರ್ ಅಂಗಳದಲ್ಲಿ ಕುಳಿತು ಕೇಳಿದರು. ತಾನು ಹೆದರಿ ಗಾಬರಿಯಾಗಿಬಿಟ್ಟೆ. ಪೆಟ್ಟು ಸಿಗಲಿಲ್ಲ. ಏಟು ತಿಂದು ತುಂಬಾ ದಿನಗಳಾಗಿದ್ದವು. ಹಲವಾರು ಸಲ ಏಟು ಸಿಗುತ್ತದೆಂದು ಖಚಿತಪಡಿಸಿ ಮೈಯೊಡ್ಡಿ ಕಣ್ಮುಚ್ಚಿ ನಿಲ್ಲುವುದುಂಟು. ಆದರೆ, ಸಿಗುತ್ತಿರಲಿಲ್ಲ. ಹಿಂದೆಲ್ಲಾ ಚೆನ್ನಾಗಿ ಏಟುಗಳು ಸಿಗುತ್ತಿದ್ದವು. ಕಾಲಿನ ಮೇಲೆ ಈಗಲೂ ಸುಟ್ಟುಗಾಯವನ್ನು ಕಾಯಿಸಿ ಕೆಂಪಾಗಿಸಿ ಬರೆಹಾಕಿದ ಗುರುತುಗಳಿವೆ. ಅವು ಶಂಕುಣ್ಣಿ ನಾಯರ್ ಕುಡಿದು ಬಂದು ಕೊಡುತ್ತಿದ್ದ ಶಿಕ್ಷೆಗಳಾಗಿದ್ದವು. ಅಂದು ಕೂಡ ಅವಳು ತುಂಬಾ ಅತ್ತಿದ್ದಳು. ಅಂದೆಲ್ಲಾ ಅವಳು ಕಾಲ ಮಂಡಿಗಳನ್ನು ಮರೆಮಾಡುವ ಲಂಗ ಮತ್ತು ಜಾಕೆಟನ್ನು ಮಾತ್ರ ತೊಡುತ್ತಿದ್ದಳು. ಆಗೊಮ್ಮೆ ಈಗೊಮ್ಮೆ ದೊಡ್ಡ ಗೆರೆಗಳಿರುವ ಜಾಕೆಟನ್ನು ತೊಡುತ್ತಿದ್ದಳು. ಮುಂಗೈಯಲ್ಲಿ ಸದಾ ಗಾಜಿನ ಬಳೆಗಳಿರುತ್ತಿದ್ದವು. ಅವು ಒಡೆದು ಹೋದಾಗ, ಅವನ್ನೆಲ್ಲಾ ಒಂದು ಪುಟ್ಟ ಪೆಟ್ಟಿಗೆಯಲ್ಲಿ ತೆಗೆದಿಡುತ್ತಿದ್ದಳು. ಸ್ವಲ್ಪ ದಿನಗಳ ನಂತರ ಅಂಗಳದಲ್ಲಿ ಕಾಲು ದೀಪವನ್ನು ಹಚ್ಚಿಟ್ಟು ತಾನು ಮತ್ತು ಅವಳು ಸೇರಿ ಬಳೆಯ ತುಣುಕುಗಳನ್ನೆಲ್ಲಾ ಒಂದೊಂದಾಗಿ ಬಿಸಿ ಮಾಡಿ ಬಾಗಿಸಿ ಒಂದಕ್ಕೊಂದು ಪೋಣಿಸಿ ಸರವನ್ನಾಗಿ ಮಾಡುತ್ತಿದ್ದೆವು. ಅಂದು ಅವಳು ಶಾಲೆಗೆ ಹೋಗುತ್ತಿದ್ದಳು. ಅವಳ ಪುಸ್ತಕದಲ್ಲಿ ಹಂಸ ಮತ್ತು ಒಬ್ಬ ರಾಜನ ಚಿತ್ರಗಳಿದ್ದವು. ಅವಳಿಗೆ ಅನೇಕ ಹಾಡುಗಳು ತಿಳಿದಿದ್ದವು. ಈಗ ಅವಳು ಹಾಡುವುದೇ ಇಲ್ಲ. ಆದರೂ ಕೆಲವೊಮ್ಮೆ ಅನಿವಾರ್ಯ ಸಂದರ್ಭಗಳಲ್ಲಿ ಹಾಡುತ್ತಿದ್ದಳು. ಒಮ್ಮೆ ಪಕ್ಕದ ಮನೆಯಲ್ಲಿ ಕೇರಳದ ಹೆಣ್ಣುಮಕ್ಕಳಾಡುವ ಸಾಂಪ್ರದಾಯಿಕ ನೃತ್ಯ. ಕೈಕೊಟ್ಟಿಕಳಿ(ಕೇರಳದ ಸಾಂಪ್ರದಾಯಿಕ ನೃತ್ಯ) ಇತ್ತು. ಅಲ್ಲಿ ಅವಳು ಹಾಡಿದ್ದಳು. ಅವಳು ನೃತ್ಯವಾಡುವುದನ್ನು ಹಾಡುವುದನ್ನು ಅಂಗಳದ ಕಿಟಕಿಯಿಂದ ನೋಡಿದ್ದೆ. ಅಂದು ಅವಳು ಆಕಾಶ ಬಣ್ಣದ ಜಾಕೆಟನ್ನು ತೊಟ್ಟು ಮಿಂಚುತ್ತಿದ್ದಳು. ಅದಕ್ಕಿಂತಲೂ ಚಂದವಾಗಿರುವ ಜಾಕೆಟನ್ನು ಬೇರೆಯವರು ತೊಟ್ಟಿದ್ದರು. ಅವಳ ಗೆಳತಿ ರಾಧ ಕೆಂಪು ಬಣ್ಣದ್ದನ್ನು ಧರಿಸಿದ್ದಳು. ತಾನು ರಾಧಾಳನ್ನು ತುಂಬಾ ಹೊತ್ತು ನೋಡುತ್ತಲೇ ಇದ್ದೆ. ರಾಧ ಅವಳಿಗಿಂತಲೂ